# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು –572103

**ದೂರವಾಣಿ :** 0816–225596, 0816–2255597, 0816–2255597 **ಫ್ಯಾಕ್ಸ್ :** 0816–2270719

**ಸಂಖ್ಯೆ:ತುವಿ:ಶೈವಿ:UG-ADM:2021–22:** 2771 **ದಿನಾಂಕ:23.11.2021**

## ಸುತ್ತೋಲೆ

**ವಿಷಯ : ಸ್ನಾತಕ ವಿದ್ಯಾರ್ಥಿಗಳು Digital fluency ಕೋರ್ಸ್ ತೆಗೆದುಕೊಳ್ಳುವ ಕುರಿತು.**
**ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 20.11.2021**
**(ಕಂಡಿಕೆ: 210 ಪುಟ ಸಂಖ್ಯೆ: 53 )**

*****

ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ನಡೆಯುವ ಪದವಿ ಕಾರ್ಯಕ್ರಮಗಳಲ್ಲಿ ಕೌಶಲ್ಯವರ್ಧನೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಶಿಕ್ಷಣದ ಉದ್ದೇಶ ಸಫಲವಾಗುವಂತೆ ಅದು ಫಲಿತಾಂಶ ಆಧಾರಿತವಾಗಿರಬೇಕು ಎಂಬುದು ಅದರ ಆಶಯ. ಭವಿಷ್ಯದ ಸವಾಲುಗಳನ್ನು ಎದುರಿಸುವಂತೆ ಇಂದಿನ ಪೀಳಿಗೆಯನ್ನು ತಯಾರುಮಾಡುವ ಧ್ಯೇಯ ಅದರದು. ಪ್ರಸ್ತುತ ಶಿಕ್ಷಣ ವ್ಯವಸ್ಥೆ ನೀಡುವ ಹಾಗೂ ಉದ್ಯೋಗದ ಕ್ಷೇತ್ರ ಬೇಡುವ ಕೌಶಲ್ಯಗಳ ನಡುವಿನ ಅಂತರವನ್ನು ತಗ್ಗಿಸುವುದು ಅದರ ಗುರಿಗಳಲ್ಲೊಂದು. ಈ ನಿಟ್ಟಿನಲ್ಲಿ ಪದವಿ ಕಾರ್ಯಕ್ರಮಗಳಲ್ಲಿ ಸೇರಿಕೆಯಾಗಿರುವ ಕೌಶಲ್ಯಾಭಿವೃದ್ಧಿ ಪತ್ರಿಕೆಗಳು ಪ್ರಾಮುಖ್ಯತೆ ಪಡೆಯುತ್ತವೆ. ಹಲವಾರು ಬಗೆಯ ಕೌಶಲ್ಯಗಳಲ್ಲಿ ಡಿಜಿಟಲ್ ಸಾಮರ್ಥ್ಯ ಅತ್ಯಂತ ಬೇಡಿಕೆಯುಳ್ಳ ಕೌಶಲ್ಯಗಳಲ್ಲೊಂದು. ಡಿಜಿಟಲ್ ಸಾಮರ್ಥ್ಯ ಇಂದು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರಗಳಲ್ಲೊಂದು. ಒಂದು ಅಂದಾಜಿನ ಪ್ರಕಾರ 2024ರ ವೇಳೆಗೆ ಈ ಕ್ಷೇತ್ರದಲ್ಲಿ ನುರಿತ ಕುಶಲಗಾರರ ಬೇಡಿಕೆಯಲ್ಲಿ 42 ಪ್ರತಿಶತ ಹೆಚ್ಚಳವಾಗಬಹುದು.

ಈ ನಿಟ್ಟಿನಲ್ಲಿ ತುಮಕೂರು ವಿಶ್ವವಿದ್ಯಾನಿಲಯ ತನ್ನ ವಿದ್ಯಾರ್ಥಿಗಳಿಗೆ ತಮ್ಮ ಡಿಜಿಟಲ್ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅವಕಾಶ ನೀಡುವ ನಿಟ್ಟಿನಲ್ಲಿ NASSCOM ಜೊತೆ ಒಡಂಬಡಿಕೆಯೊಂದನ್ನು ಮಾಡಿಕೊಳ್ಳುತ್ತಿದೆ. ಅದರಂತೆ ತುಮಕೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳು NASSCOM ನೀಡುವ ಕೌಶಲ್ಯಾಭಿವೃದ್ಧಿ ಪತ್ರಿಕೆಗಳನ್ನು ಆರಿಸಿಕೊಂಡು ಕಲಿತು ಅರ್ಹತೆ ಪಡೆದುಕೊಳ್ಳಬಹುದು. ಈ ಕೋರ್ಸ್‌ಗಳಿಗೆ ಯಾವುದೇ ಶುಲ್ಕವಿರುವುದಿಲ್ಲ ಹಾಗೂ ಈ ಅರ್ಹತೆಯನ್ನು ಪದವಿ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕಾದ ಕೌಶಲ್ಯಾಭಿವೃದ್ಧಿ ಪತ್ರಿಕೆಗಳಾಗಿಯೇ ಪರಿಗಣಿಸಲಾಗುತ್ತದೆ.

ಇದಕ್ಕಾಗಿ ವಿದ್ಯಾರ್ಥಿಗಳು ಹಾಗೂ ಆಸಕ್ತಿಯುಳ್ಳ ಬೋಧಕರು ಗೂಗಲ್ ಫಾರ್ಮ್ ಅನ್ನು ಭರ್ತಿ ಮಾಡಬೇಕಾಗುತ್ತದೆ. ಅದಕ್ಕಾಗಿ ಈ ಕೊಂಡಿಯನ್ನು ಬಳಸಬಹುದು: https://forms.gle/MGwYoGfAxt2P1xFq6. ಅಥವಾ ಈ QR ಕೋಡ್ ಅನ್ನು ಬಳಸಿಯೂ ವಿವರಗಳನ್ನು ಸಲ್ಲಿಸಬಹುದು.

ಎಲ್ಲಾ ಘಟಕ ಹಾಗೂ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು ಈ ಮಾಹಿತಿಯನ್ನು ಬೋಧಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಹಂಚಿಕೊಳ್ಳಲು ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಈ ಕುರಿತು ಮಾರ್ಗದರ್ಶನ ನೀಡಲು ಮಾರ್ಗದರ್ಶಕ/ಸಂಯೋಜಕರನ್ನು ನೇಮಿಸಿ ಈ ಕುರಿತು ವಿಶ್ವವಿದ್ಯಾನಿಲಯಕ್ಕೆ ಮಾಹಿತಿ ನೀಡಲು ತಿಳಿಸಿದೆ. ಈ ಸುತ್ತೋಲೆಯನ್ನು ಕಾಲೇಜಿನ ಸೂಚನಾಫಲಕದಲ್ಲಿ ಪ್ರಕಟಿಸಲು ಕೋರಿದೆ ಹಾಗೂ ಇದರ ಸದುಪಯೋಗ ಪಡೆದುಕೊಳ್ಳಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಈ ಮೂಲಕ ತಿಳಿಸಿದೆ.

Digital fluency ಕೋರ್ಸ್‌ಗೆ ನೊಂದಣಿ ಮಾಡಿಕೊಳ್ಳುವ ವಿಧಾನ ಹಾಗೂ ಸದರಿ ಕೋರ್ಸ್‌ನ ಕೈಪಿಡಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಆದೇಶದ ಮೇರೆಗೆ

Mangalagowri M

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾಲಯ
ತುಮಕೂರು

ಉಪಕುಲಸಚಿವರು

ಗೆ,

ಪ್ರಾಂಶುಪಾಲರು, ಎಲ್ಲಾ ಘಟಕ ಮತ್ತು ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಮುಂದಿದೆ

ಪ್ರತಿಗಳು:

1) ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಎಲ್ಲಾ ಘಟಕ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರಿಗೆ ಇ–ಮೇಲ್ ಮುಖಾಂತರ ಕಳುಹಿಸುವುದು.
2) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3) ಕಚೇರಿ ಪ್ರತಿ.